ಶ್ರೀ ಟಿ.ಎಂ. ಮಂಜುನಾಥ್.—ಮಾನ್ಯ ಅಧ್ಯಕ್ಷರೆ, ರೈತರ ಸಾಲದ ಬಗೆ ಬಹಳ ವಿಸ್ತಾರವಾದ ವಿಚಾರ ವಿನಿಮಯಗಳು ನಡೆದಮೇಲೆ ನಮ್ಮ ರಾಜ್ಯದ ಮಂಖ್ಯಮಂತ್ರಿಗಳು ಬಹಳ ಯೋಚನೆ ಮಾಡಿ ನಮ್ಮ ರಾಜ್ಯದಲ್ಲಿ ರೈತರ ಹಿತಾಸಕ್ತಿಯನ್ನು ಪರಿಗಣಿಸಿ ಅವರ ತೊಂದರೆಗೆ ಧಕ್ಕೆ ಬರಬಾರದೆಂಬ ದೃಷ್ಟಿಯಿಂದ ನಮ್ಮ ರಾಜ್ಯ ಸರ್ಕಾರ ಸಾಲದ ಹೊರೆ ಪಡೆದರೂ ಚಿಂತೆಯಿಲ್ಲ ಎನ್ನುತಕ್ಕಂಥ ಭಾವನೆಯಿಂದ, ರೈತರ ಹಿತಾಸಕ್ತಿಯನ್ನು, ಸಂಪೂರ್ಣವಾಗಿ ಒಪ್ಪಿ, ಇವತ್ತಿನ ದಿವಸ ಕೇಂದ್ರ ಸರ್ಕಾರ ಕಳುಹಿಸಿರತಕ್ಕ ಯೋಜನೆಯನ್ನು ಒಪ್ಪಿ, ರೈತರಿಗೆ ಏನು ಸಾಲ ಮನ್ನಾ ಮಾಡುವ ಬಗ್ಗೆ ಮಂಚೂಣಿಯಲ್ಲಿ ಕೆಲಸ ಮಾಡಿದ್ದಾರೆ ಅದಕ್ಕೋಸ್ಕರ ಪಕ್ಷದ ವತಿಯಿಂದ ನಮ್ಮ ಮಾನ್ಯ ಮಂತ್ರಿಗಳನ್ನು ಇಡೀ ಕರ್ನಾಟಕದ ರೈತರ ಪರವಾಗಿ ಅವರನ್ನು ಅಭಿನಂದಿಸುತ್ತೇನೆ.

ಅಧ್ಯಕ್ಷರು.—ಈಗ ಚರ್ಚೆ ಮುಕ್ತಾಯ ಆಯಿತು.

ಶ್ರೀ ಎಂ. ಪಿ. ವೆಂಕಟೇಶ್.—ನಾನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು —ಯಾವ ವಿಚಾರ ?

ಶ್ರೀ ಎಂ. ಪಿ. ವೆಂಕಟೇಶ್.—ನಾನು ಎರಡು ನಿಮಿಷದಲ್ಲಿ ಮುಗಿಸುತ್ತೇನೆ. ಸಭಾಧ್ಯಕ್ಷರೆ, ಹಣಕಾಸಿನ ಪರಿಸ್ಥಿತಿ ಬಹಳ ತೊಂದರೆ ಇದೆ ಎಂದು...

ಅಧ್ಯಕ್ಷರು.—ಅದನ್ನೇ ಹೇಳಬೇಡಿ.

ಶ್ರೀ ಎಂ. ಪಿ. ವೆಂಕಟೇಶ್.—೨೨ನೇ ತಾರೀಖು ಗ್ಯಾನೈಟ್ ರಾಷ್ಟ್ರೀಕರಣವನ್ನು ತೆಗೆದಿದ್ದಾರೆ.

ಅಧ್ಯಕ್ಷರು.—ಅದಕ್ಕೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಎಂ. ಪಿ. ವೆಂಕಟೇಶ್.—ರಾಷ್ಟ್ರೀಕರಣವನ್ನು ೨೨ನೇ ತಾರೀಖು ತೆಗೆದಿದ್ದಾರೆ.

ಅಧ್ಯಕ್ಷರು —ನೀವು ಆದರ ವಿಚಾರವಾಗಿ ನೋಟೀಸ್ ಕೊಡಿ. ವಿಶೇಷವಾದ ಚರ್ಚೆಗೆ ನಿವು ನಾನು ಏರ್ಪಾಡು ಮಾಡಿಕೊಡುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.— ಸಲಹೆ ಕೊಡಿ ಎಂದು ಹೇಳಿದರಲ್ಲ ಅದಕ್ಕೆ ತಮ್ಮ ಗಮನಕ್ಕೆ ತರುತ್ತಿದ್ದೇನೆ,

ವಿತ್ತೀಯ ಕಾರ್ಯಕಲಾಪಗಳು

ಅಧ್ಯಕ್ಷರು.—೧೯೯೦-೯೧ ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಗಳ ಮೇಲೆ ಚರ್ಚೆ. ಮಾನ್ಯ ಮಂತ್ರಿಗಳಾದ ನರಸಿಂಹಮೂರ್ತಿಯವರು ತಮ್ಮ ಇಲಾಖೆ ಬೇಡಿಕೆಗಳನ್ನು ಮಂಡಿಸಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ (ನಗರಾಭಿವೃದ್ಧಿ ಮತ್ತು ಮೂಸುಗಾರಿಕೆ, ಬಂದರು ಮಂತ್ರಿಯವರು).— ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನನ್ನ ಖಾತೆಗಳ ಬೇಡಿಕೆಗಳ ಸಂಖ್ಯೆ ೫, ೪೮, ೩೨, ೩೩ ಮತ್ತು ೩೪ನೇ ಸಂಖ್ಯೆಯ ಈ ಕೆಳಗಿನ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಭಿಯಾಚನೆ ಕ್ರಮಾಂಕ ೫— ಮೂಸುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೭೬,೬೮,೮೮,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೩೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೩೨ – ಗೃಹನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಬಿಟ್ಟು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹನಿರ್ಮಾಣಕ್ಕೆ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು) ಸಂದಾಯ ಮಾಡುವಲ್ಲಿ ಬರತಕ್ಕಂಥ ಮೆಚ್ಚವನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೪,೨೨,೪೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೮,೮೪,೫೦,೦೦೧ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೩೩ — ನಗರಾಭಿವೃದ್ಧಿ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂತ ಮೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೬,೩೬,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬,೫೧,೩೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೩೪— ನಗರ ಪಾಲಿಕೆಗಳು ಮತ್ತು ಪಟ್ಟಣ ಪಂಚಾಯಿತಿಗಳಿಗೆ ಅನುದಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಿಗಮ ಮತ್ತು ನಗರ ಪಾಲಿಕೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ಮೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೬೭,೭೫,೫೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೪೮ — ರೇವು ಮತ್ತು ಜಲ ಸಾರಿಗೆ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೧ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲ ಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ಮೆಚ್ಚವನ್ನು ವಹಿಸಲು ಸರಕಾರಕ್ಕೆ, ರಾಜಸ್ವ ಖಾತೆಯಲ್ಲಿ ೨.೧೭,೧೩,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫.೦೯,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.— ಬೇಡಿಕೆಗಳನ್ನು ಸಭೆಯು ಮಂಜೂರು ಮಾಡಿದೆಯಲಾಗಿದೆ. ಈಗ ಒಂದು ಪ್ರಕಟಣೆ ಇದೆ.

ಶ್ರೀ ವಾಟಾಳ್ ನಾಗರಾಜ್.— ಒಂದು ಕಡೆ ಧರಣಿ ಕುಳಿತಿರುವುದು, ಇನ್ನೊಂದು ಕಡೆ ಕಾರ್ಯ ಕಲಾಪ ನಡೆಸುವುದು ಸರಿಯಲ್ಲ.

ಅಧ್ಯಕ್ಷರು.— ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಲಿ.

ಶ್ರೀ ಡಿ. ಬಿ. ಚಂದ್ರೇಗೌಡ.— ಮಾನ್ಯ ಮಂತ್ರಿಗಾಜ ನ ಖಾರ್ಗೆಯವರು ಪಾಯಿಂಟ್ ಆಫ್ ಆರ್ಡರ್ ತೆಗೆದಿದ್ದರು. ಅದಕ್ಕೆ ತಾವು ಏನೂ ಹೇಳಲಿಲ್ಲ ನಾನು ಮಾನ್ಯ ಬಿ. ಜೆ. ಪಿ. ಸದಸ್ಯರಿಗೆ ಅಪೀಲ್ ಮಾಡಿಕೊಳ್ಳುತ್ತೇನೆ. ಸ್ವಲ್ಪಮಟ್ಟಿನ ಪರಿಹಾರ ಸಿಕ್ಕಿದೆ. ಈ ಸಂದರ್ಭದಲ್ಲಿ ವಿಷಯವನ್ನು ಲಂಬಿಸುವುದು ಒಳ್ಳೆಯದಲ್ಲ. ಅವರ ಭಾವನೆಗಳಿಗೆ ನನ್ನ ವಿರೋಧ ಇಲ್ಲ. ಒಳ್ಳೆಯ ವಾತಾವರಣ ಇದೆ. ಪುನಃ ಅದನ್ನು ಕೆಡಿಸುವುದು ಬೇಡ. ದಯಮಾಡಿ ಸಭೆ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಮನಸ್ಸಿಲ್ಲದ ಮನಸ್ಸಿನಿಂದ ಧರಣಿ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಅದನ್ನು ತಾವೂ ಗಮನಿಸಿದ್ದೀರಿ. ಸಭೆ ಮುಂಗಿಯಲು ಇನ್ನು ಕೇವಲ ೨೦ ನಿಮಿಷ ಇದೆ. ಆದ್ದರಿಂದ ಸಭೆಯನ್ನು ನಾಳೆಗೆ ಮುಂದೂಡುವುದು ಒಳ್ಳೆಯದೆಂದು ನನಗನ್ನಿಸುತ್ತದೆ.

ಅಧ್ಯಕ್ಷರು.— ಮಾನ್ಯ ಮುಖ್ಯಮಂತ್ರಿಗಳು ಕ್ಯಾಟಗಾರಿಕಲ್ಲಾಗಿ, ಸ್ಪಷ್ಟವಾಗಿ ಎಲ್ಲರಿಗೂ ಕನ್ನಡ ತಿಳಿಯುವ ಹಾಗೆ ಇದು ಸಾಧ್ಯವಾಗುವುದಿಲ್ಲ ಎಂದು ಹೇಳಿದಮೇಲೆ ಪುನಃ ರಿಪೀಟ್ ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ವಾಟಾಳ್ ನಾಗರಾಜ್.— ಈಗ ಸಮಸ್ಯೆ ಇಷ್ಟೆ. ತಾವು ಮಾನ್ಯ ಬಿ. ಜೆ. ಪಿ. ಅಧ್ಯಕ್ಷರ ಜೊತೆಯಲ್ಲಿ ತಮ್ಮ ಮನವಿ ಸಲ್ಲಿಸಿ ತಿಳಿ ವಾತಾವರಣಕ್ಕೆ ಬರಬೇಕು. ಅವರು ಒಳಗಡೆ ಧರಣಿ ಕುಳಿತಿರುವಾಗ ಚರ್ಚೆ ಮಾಡುವುದು ಸರಿಯಲ್ಲ. ಅವರು ಒಳ್ಳೆಯ ಉದ್ದೇಶದಿಂದ ಕುಳಿತಿದ್ದಾರೆ.

ಅಧ್ಯಕ್ಷರು.— ನಾನು ಮನವಿ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಲ್ಲಿ ನಾನು ಕಳಕಳಿಯಿಂದ ಸೂಚನೆ ಮಾಡತಕ್ಕದ್ದು, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಶ್ವಾಸನೆಯನ್ನು ಕೊಟ್ಟಿದ್ದಾರೆ ಮತ್ತು ಆ ಆಶ್ವಾಸನೆಯಲ್ಲಿ ನಿರ್ದಿಷ್ಟ ತಿರುಳು ಇದೆ ಮತ್ತು ಸತ್ವ ಇದೆ. ಕಳೆದ ನಾಲ್ಕು ಚರ್ಚೆಗಳ ಸಮಯದಲ್ಲಿ. ಶ್ರೀಮಾನ್ ಬೈರೇಗೌಡರು ಹೇಳಿದ ಹಾಗೆ, ಒಂದು ಹೆಜ್ಜೆ, ಎರಡು ಹೆಜ್ಜೆ ಮುಂದೆ ಹೋಗಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡಾ ಅದನ್ನು ಒಪ್ಪಿದ್ದಾರೆ. ಆದುದರಿಂದ ಇಂತಹ ಒಂದು ಒಳ್ಳೆಯ ವಾತಾವರಣವನ್ನು ಮಾನ್ಯ ಮಂಖ್ಯಿ ಮಂತ್ರಿಯವರು, ಈ ಸದನದ ನಾಯಕರು ಸೃಷ್ಟಿ ಮಾಡಿರುವಾಗ ಮಾನ್ಯ ಬಿಜೆಪಿ ಸದಸ್ಯರು ಸಹಕರಿಸಿ. ಅವರು ತಮ್ಮ ಸ್ಥಾನಗಳಿಗೆ ಹೋಗಿ ಈ ಸದನದ ಕಾರ್ಯಕಲಾಪಗಳು ಸುಸೂತ್ರವಾಗಿ ನಡೆಯುವುದಕ್ಕೆ ನನಗೆ ಸಹಕಾರಿಯಾಗಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ —ಅಧ್ಯಕ್ಷರೇ, ಒಂದು ನಿಮಿಷ ನಾನು ಅವರಲ್ಲಿಗೆ ಹೋಗಿ ಮಾತನಾಡಲು ಅವಕಾಶ ಕೊಟ್ಟರೆ ನಾನು ಅವರ ಮನವೊಲಿಸಲು ಪ್ರಯತ್ನ ಪಡುತ್ತೇನೆ. ಇದು ನಗುವಂಥ ವಿಚಾರವಲ್ಲ. ನಾನು ಹೋಗಿ ಅವರ ಮನವೊಲಿಸಲು ಪ್ರಯತ್ನಿಸುತ್ತೇನೆ.

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ.—ತಾವು ೧ ತಿಂಗಳು ಮುಂತ್ರಿಗಿರಿ ಕೊಟ್ಟರೆ ಒಂದು ಕೋಟಿ ಕೊಡುತ್ತೇನೆ ಎಂದಿದ್ದು ನಗುವ ವಿಷಯವಲ್ಲವೇ ? (ಮಾನ್ಯ ವಾಟಾಳ್ ನಾಗರಾಜ್ ಅವರು ಧರಣಿ ಕುಳಿತಿದ್ದ ಸದಸ್ಯರ ಬಳಿ ಹೋಗಿ ಅವರೊಡನೆ ಚರ್ಚೆ ನಡೆಸಿದರು)

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ನಾನು ಅವರ ಜೊತೆ ಮಾತನಾಡಿದೆ. ಯಾರ ಮೇಲೂ ವಿರೋಧ ಇಲ್ಲ. ನಮ್ಮ ರಾಷ್ಟ್ರೀಯ ನೀತಿಗೆ ಮನ್ನಣೆ ಕೊಡುವುದಕ್ಕೋಸ್ಕರ ನಾವು ಕೂತಿದ್ದೇವೆ ಎಂದು ಹೇಳಿದರು.

ಅಧ್ಯಕ್ಷರು.—ಮಾನ್ಯ ಸದಸ್ಯರ ಗಮನಕ್ಕೆ ೧೯೭೦ನೇ ಇಸವಿ ಏಪ್ರಿಲ್ ೩ನೇ ತಾರೀಖಿ ಇಂತಹದ್ದೇ ಒಂದು ಪರಿಸ್ಥಿತಿ ಈ ಸದನದಲ್ಲಿ ಉದ್ಭವಿಸಿದ್ದನ್ನು ತರುತ್ತಿದ್ದೇನೆ ಆಗ ಸದಸ್ಯರಾಗಿದ್ದ ಶ್ರೀಯುತ ಬಿ. ಭಾಸ್ಕರ ಶೆಟ್ಟಿಯವರು ಹೀಗೆ ಧರಣಿ ಕುಳಿತಿದ್ದರು. ಆಗ ಶ್ರೀ ಹೆಚ್. ಸಿದ್ದವೀರಪ್ಪನವರು ಮಾನ್ಯ ಸದಸ್ಯರಾಗಿದ್ದರು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇವತ್ತು ಏನು ಪ್ರಶ್ನೆಯನ್ನು ಎತ್ತಿದರೋ ಆಂಥದೇ ಪ್ರಶ್ನೆಯನ್ನು ಮಾನ್ಯ ಹೆಚ್. ಸಿದ್ಧವೀರಪ್ಪನವರು ಕೂಡಾ ಎತ್ತಿದ್ದರು.

Whether the House was in order and whether the Proceedings could go on. Thereupon then Speaker observed as follows.

> " Sitting of one member on the floor of the House cannot make the proceedings of the House come to a stand still. Therefore, inspite of the hon, members sitting, I think, the proccedings can go on. No. single member or a couple of members can render the House incapable of carrying on its business. I therefore say that the sitting for one member on dharna doesn't render the House ineffective. "

ಕಳೆದ ನಮ್ಮ ಶಾಸನ ಸಭೆಯ ನಡವಳಿಕೆಗಳನ್ನು ಗಮನಿಸಿದರೆ I am inclined to totally agree with the ruling that has been given by illustrious predecessor and I hold the House to be perfectly in order.

ಗೈರು ಹಾಜರಿಗೆ ಅನುಮತಿ ನೀಡಿಕೆ.

ಅಧ್ಯಕ್ಷರು.—ವಿಧಾನ ಸಭೆಯ ಸದಸ್ಯರಾದ ಶ್ರೀ ಬಾಪುಸಾಹೇಬ್ ಆರ್. ಮಹಾಗಾಂವಕರ್ ಅವರು ಬೆಳಗಾಂನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಾರಣ ದಿನಾಂಕ ೪ನೇ ಜೂನ್ ೧೯೬೦ ರಿಂದ ೩ನೇ ಜುಲೈ ೧೯೬೦ ರವರೆಗೆ ಒಂದು ತಿಂಗಳ ಕಾಲ ವಿಧಾನ ಸಭೆಯ ಅಧಿವೇಶನಕ್ಕೆ ಹಾಜರಾಗಲು ಸಾಧ್ಯವಿಲ್ಲವೆಂದು ಪತ್ರ ಬರೆದಿರುತ್ತಾರೆ.

" ಶ್ರೀ ಬಾಪುಸಾಹೇಬ್ ಆರ್. ಮಹಾಗಾಂವಕರ್ ಅವರು ಮೇಲೆ ಸೂಚಿಸಿದ ಅವಧಿಯಲ್ಲಿ ಸದನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೆ "

(ಯಾವ ಸದಸ್ಯರೂ ಸೂಚನೆಗೆ ವಿರೋಧ ವ್ಯಕ್ತ ಪಡಿಸಲಿಲ್ಲ.)

ಅಧ್ಯಕ್ಷರು.—ಶ್ರೀ ಬಾಪುಸಾಹೇಬ್ ಆರ್. ಮಹಾಗಾಂವಕರ್ ಅವರಿಗೆ ಗೈರು ಹಾಜರಾಗಲು ಅನುಮತಿಯನ್ನು ನೀಡಲಾಗಿದೆ.

೧೯೬೦-೬೧ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಅಧ್ಯಕ್ಷರು. —ಮಾನ್ಯ ಸದಸ್ಯರಾದ ಆರ್. ವಿ. ದೇಶಪಾಂಡೆಯವರು ತಮ್ಮ ತಮ್ಮ ಭಾಷಣ ಶುರು ಮಾಡಿ. ಆರು ಗಂಟೆಯಾದ ಮೇಲೆ ಅರ್ಧ ಗಂಟೆ ಇದೆ. ಇವತ್ತು ಪ್ರಾಸ್ತಾವಿಕವಾಗಿ ನಾಲ್ಕು ಮಾತು ಹೇಳಿ. ಅನಂತರ you go for full class tomorrow.

ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ).—ಮಾನ್ಯ ಅಧ್ಯಕ್ಷರೆ. ಪತಿ, ನಗರಾಭಿವೃದ್ಧಿ ಮುನಿಸಿಪಾಲಿಟಿ ಮತ್ತು ಮೀನುಗಾರಿಕೆ ಇಲಾಖೆಗಳ ಬೇಡಿಕೆಯನ್ನು ಮಾನ್ಯ ಸಚಿವರು ಏನು ಮಂಡಿಸಿದ್ದಾರೆ ಅದರ ಬಗ್ಗೆ ನಾನು ವಿರೋಧ ವ್ಯಕ್ತ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೆ. ಈ ಸಭೆಯನ್ನು ಮುಂದೂಡಿ ಅವರನ್ನು ಅಲ್ಲಿ ಕೂರಿಸಿಕೊಂಡು, ಅವರು ಧರಣಿ ಮಾಡುತ್ತಿರುವಾಗ, ನಮ್ಮ ಸಹ ಸದಸ್ಯರು ಅಲ್ಲಿ ಕುಳಿತು ಕೊಂಡಿರುವಾಗ.....

ಅಧ್ಯಕ್ಷರು.—ನಾನು ಈಗಾಗಲೇ ನನ್ನ ತೀರ್ಮಾನವನ್ನು ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಮತ್ತೊಮ್ಮೆ ತಮ್ಮ ತೀರ್ಮಾನವನ್ನು ಪುನರ್ ಪರಿಶೀಲಿಸಿ ಬುದ ತೀರ್ಮಾನಕ್ಕೆ ಬರುವುದು ಒಳ್ಳೆಯದು. ತಾವು ಇನ್ನು ಒಂದು ಗಂಟೆ ಸಭೆಯನ್ನು ನಡೆಸುವುದಾದರೆ, ಅವರ ಕಡೆಯವರೊಬ್ಬರನ್ನು ಕರೆದು ಮಾತುಕತೆ ಆಡಿ ಒಂದು ತೀರ್ಮಾನಕ್ಕೆ ಬನ್ನಿ. ಅವರು ಅಲ್ಲಿ ಧರಣಿ ಕುಳಿತುಕೊಂಡಿರುವಾಗ ವಿರೋಧಪಕ್ಷದವರು ಮಾತನಾಡುವುದು ಅದು ಸರಿಯಲ್ಲ. ದಯಮಾಡಿ ಏನಾದರೂ ಒಂದು ತೀರ್ಮಾನ ಮಾಡಬೇಕು.

ಅಧ್ಯಕ್ಷರು. —ಮಾನ್ಯ ದೇಶಪಾಂಡೆಯವರು ತಾವು ಮಾತನಾಡಿ.

ಶ್ರೀ ಆರ್. ವಿ. ದೇಶಪಾಂಡೆ.—ಬೇಡಿಕೆಗಳನ್ನು ವಿರೋಧ ಮಾಡುತ್ತಾ, ಕೆಲವು ವಿಚಾರಗಳನ್ನು ಸಭೆಯ ಮುಂದಿಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ನಗರಾಭಿವೃದ್ಧಿ ಮತ್ತು ವಸತಿ ಇಲಾಖೆಯ ಬಗ್ಗೆ ಪ್ರಾಮಾಣಿಕವಾಗಿ ಮತ್ತು ಬಹಳ ವಿನಯದಿಂದ ಹೇಳುತ್ತಿದ್ದೇನೆ. ಈ ಸರ್ಕಾರ ಬಂದ ನಂತರ ಈ ಇಲಾಖೆಯು ಒಂದು ಗೌರವ. ಮರ್ಯಾದೆ ಅವು ತಮ್ಮ ಜೇಕಿಗಳಿಂದ ಕಡಿಮೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಇದು ನಮಗೆ ಸಂತೋಷ ಕಾಣುತ್ತಿಲ್ಲ. ಬಹಳ ನೋವಾಗುತ್ತಿದೆ ಇದೊಂದು ಸಂಪ್ರದಾಯವಾಗಬಾರದು. (ಜನತಾದಳದ ಸದಸ್ಯರನ್ನು ಉದ್ದೇಶಿಸಿ) ನಾಳೆ ನಾವು ನೀವು ಧರಣಿ ಕುಳಿತುಕೊಂಡಾಗ ನಾವು ಮಾತನಾಡಬಹುದೆ ? ಅಧ್ಯಕ್ಷರು ಸಭೆಯ ನಡವಳಿಕೆಯ ಬಗ್ಗೆ ಹೇಳಿದ್ದಾರೆ. ನಾವು ಒಂದು ಪ್ರಯತ್ನ ಪಡಬೇಡವೆ ? ತಾವು ಅಧ್ಯಕ್ಷರು ಹೇಳಿದ ತಕ್ಷಣ ಮಾತನಾಡುವುದು ಅಂದರೆ ಹೇಗೆ ? ನಾವು ಬಿ. ಜೆ. ಪಿ. ಯವರ ತತ್ವ ನೀತಿಯನ್ನು ಒಪ್ಪದೇ ಇರಬಹುದು. ವಿರೋಧಪಕ್ಷದವರು ಸಹಕಾರ ಮಾಡಿ, ಹೊರಗಡೆ ಹೋಗೋಣವೇ ಅಥವಾ

ಅಧ್ಯಕ್ಷರ ಜೊತೆಯಲ್ಲಿ ಮಾತುಕತೆ ಆಡಿ ಯಾವುದಾದರೂ ಒಂದು ತೀರ್ಮಾನ ಮಾಡಬೇಡವೆ. ನೀವು ಭಾಷಣ ಶುರು ಮಾಡಿದರೆ ಗತಿ ಹೇಗೆ ?

ಶ್ರೀ ಆರ್. ವಿ. ದೇಶಪಾಂಡೆ.—ಅಧ್ಯಕ್ಷರು, ಒಂದು ನಿರ್ಣಯ ಕೊಟ್ಟಿದ್ದಾರೆ. ನಾವು ಆ ನಿರ್ಣಯಕ್ಕೆ ಬದ್ಧರಾಗಿ ನಡೆಯಬೇಕು. ಈ ಬೇಡಿಕೆಯನ್ನು ನಾಳೆ ತೆಗೆದುಕೊಳ್ಳೋಣವೆಂದು ನಾನು ವಿನಂತಿ ಮಾಡಿದೆ. ಇವತ್ತು ಬೇಡವೆಂದು ಹೇಳಿದೆ. ಅಧ್ಯಕ್ಷರು ಮಾತನಾಡಬೇಕೆಂದು ಹೇಳಿದ್ದಾರೆ, ನಾನು ಮಾತನಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ನಮ್ಮ ಅಧ್ಯಕ್ಷರ ಮನವೊಲಿಸುವುದಕ್ಕೆ ಸರ್ವ ಪ್ರಯತ್ನ ಮಾಡೋಣ. ಸಭೆಯನ್ನು ಮುಂದೆ ಹಾಕಿ. ಅವರು ಧರಣಿ ಕುಳಿತುಕೊಂಡಿರುವಾಗ ಸಭೆ ನಡೆಸುವುದು ಅಷ್ಟು ಸಮಂಜಸವಾಗಿ ನನಗೆ ಕಾಣುತ್ತಿಲ್ಲ. ಇದೇ ಸಂಪ್ರದಾಯವಾಗಬಾರದು. ಹಾಗಾದರೆ ನಾಳೆ ಸರ್ಕಾರದ ವಿರುದ್ಧ ನಾವು ಅನೇಕ ಸಮಸ್ಯೆಗಳ ಬಗ್ಗೆ ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ಪ್ರತಿ ಸಾರಿ ಧರಣಿ ಕುಳಿತುಕೊಂಡಾಗಲೂ ತಾವು ಈ ಒಂದು ತೀರ್ಪು ಕೊಟ್ಟರೆ ನಮ್ಮ ಪರಿಸ್ಥಿತಿ ಏನು ? ಆದ್ದರಿಂದ ದಯವಿಟ್ಟು ಸಂಪ್ರದಾಯವನ್ನು ಬದಲಾಯಿಸಿ ಮಾಡಿ.

ಅಧ್ಯಕ್ಷರು.—ಸಭೆ ನಡೆಸತಕ್ಕ ಜವಾಬ್ದಾರಿ ಮಾತ್ರ ನನ್ನದು. ಆದ್ದರಿಂದ ಸಭೆ ನಡೆಸತಕ್ಕಂಥ ಪೊಣೆಗಾರಿಕೆಯನ್ನು ನಿರ್ವಹಿಸುತ್ತಿದ್ದೇನೆ. ನಾನು ಹೊಸದಾಗಿ ಏನೂ ರೂಲಿಂಗ್ ಕೊಡುತ್ತಿಲ್ಲ. ಹಿಂದೆ ಕೊಟ್ಟಿರತಕ್ಕ ರೂಲಿಂಗ್‌ನ್ನು ಎತ್ತಿಹಿಡಿಯುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಇದು ಸಂಪ್ರದಾಯವಾಗಬಾರದು, ನಾಳೆ ಸರ್ಕಾರದ ಅನೇಕ ಸಮಸ್ಯೆಗಳ ಬಗ್ಗೆ ಧರಣಿ ಮಾಡಬೇಕಾಗುತ್ತದೆ, ಅಂತಹ ಪರಿಸ್ಥಿತಿ ಬರುತ್ತದೆ. ಅಂತಹ ಪರಿಸ್ಥಿತಿ ಬಂದಾಗ ಎಲ್ಲರೂ ಧರಣಿ ಮಾಡಿದಾಗ, ಇಡೀ ಸಭೆ ಧರಣಿ ಕುಳಿತುಕೊಂಡಾಗ ಆವತ್ತು ಪರಿಸ್ಥಿತಿ ಏನು ಉದ್ಭವವಾಗುತ್ತದೆ ಸ್ವಾಮಿ ? ಆಗ ಬೇರೆ ಪ್ರಶ್ನೆ ಉದ್ಭವವಾಗುತ್ತದೆ.

ಅಧ್ಯಕ್ಷರು.—ಅಂತಹ ಪರಿಸ್ಥಿತಿ ಬಾರದೇ ಇರಲಿ ಎಂದು ಆಶಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ತಾವು ವಿರೋಧ ಪಕ್ಷದಲ್ಲಿದ್ದವರು, ಲೋಕಸಭೆಯಲ್ಲಿದ್ದವರು. ಈ ಸ್ಥಾನದಲ್ಲಿ ನಾನು ಕುಳಿತುಕೊಂಡು ನೋಡಿದ್ದೇನೆ. ಯಾವ್ಯಾವ ರೀತಿಯಲ್ಲಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದೀರಿ ಎಂಬುದನ್ನು ನಾವು ನೋಡಿದ್ದೇವೆ. ದಯವಿಟ್ಟು ಒಂದು ಹೊಸ ನೀತಿಯನ್ನು ಅಳವಡಿಸಬೇಕೆಂದು ಹೇಳುತ್ತೇನೆ. ಏಕೆಂದರೆ, ವಿರೋಧ ಪಕ್ಷದ ನಮ್ಮ ಸ್ನೇಹಿತರು ಧರಣಿ ಕುಳಿತಿದ್ದಾರೆ. ಅವರು ಹೀಗೆ ಕುಳಿತಿರುವಾಗ ನಾವು ಸಭೆ ನಡೆಸುತ್ತೇವೆ ಎಂದರೆ ಹೇಳಿದರೆ ಅದು ಸರಿಯಲ್ಲ.

ಅಧ್ಯಕ್ಷರು.—ಮೂಲಭೂತವಾದ ಪ್ರಜಾಪ್ರಭುತ್ವ ಚೌಕಟ್ಟಿನ ನಿಯಮ ಏನು ಎಂದು ಹೇಳಿದರೆ, ನಾನು ನಾಲ್ಕು ಚರ್ಚೆಗಳಿಗೆ ಅವಕಾಶ ಕೊಟ್ಟಿದ್ದೇನೆ. ಚರ್ಚೆ ನಿನ್ನೆಯಿಂದ ಇವತ್ತಿನವರೆಗೆ ನಡೆದಿದೆ. ಆದರೆ ಇವತ್ತು ಬಹುಮತದಿಂದ ಸರ್ಕಾರವನ್ನು ರಚನೆ ಮಾಡಿ, ಸರ್ಕಾರವನ್ನು ನಡೆಸುತ್ತಿದ್ದಾರೆ. ನೀವು ಏನು ಹೇಳುತ್ತೀರಿ, ಅದಕ್ಕೆ ಅವರು ಒಪ್ಪುವುತ್ತಿಲ್ಲ. ಆದ್ದರಿಂದ you have to have your say, they will have their way. As I am Speaker I am helpless. But I have to conduct the business of the House. ಶ್ರೀ ವಾಟಾಳ್ ನಾಗರಾಜ್‌ರವರೇ. ಇದಕ್ಕೆ ಪರಿಹಾರವನ್ನು ನೀವೇ ಹೇಳಿ. ನೀವು ಬಹಳ ಸೀನಿಯರ್ ಸದಸ್ಯರು ಇದ್ದೀರಿ. ನಿಮ್ಮ ಮಾರ್ಗದರ್ಶನ ಕೊಡಿ.

ಶ್ರೀ ವಾಟಾಳ್ ನಾಗರಾಜ್.—ಸಭೆಯನ್ನು ಇನ್ನೂ ಐದು ನಿಮಿಷ ಮುಂದುವರಿಸುವುದಾದರೆ, ತಾವು ಅವರ ಜೊತೆ ಮಾತುಕತೆ ನಡೆಸಿ ಅನೇಕ ಸಾರಿ ಸ್ಪೀಕರ್‌ರವರು ತಮ್ಮ ಕಾರ್ಯಾಲಯದಲ್ಲಿ ಧರಣಿ ಕುಳಿತವರನ್ನು ಕರೆಸಿ ಮಾತನಾಡಿದ ಸಂದರ್ಭಗಳು ಅನೇಕ ಇವೆ. ಹಿಂದೆ ನಾವು ನೋಡಿದ್ದೇವೆ ಆದ್ದರಿಂದ ತಾವು ಅವರ ಕಡೆಯವರನ್ನು, ವಿರೋಧ ಪಕ್ಷದವರನ್ನು ಕರೆದು ಮಾತನಾಡಿದರೆ ಒಳ್ಳೆಯದು.

ಶ್ರೀ ಬಿ. ಎಚ್. ಬನ್ನಿಕೋಡ್.—ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದ ಸಲಹೆ ಸೂಕ್ತವೆಂದು ಕಾಣುತ್ತದೆ ತಾವು ತಮ್ಮ ಛೇಂಬರ್‌ನಲ್ಲಿ ಅವರನ್ನು ಕರೆಸಿ ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಾವು ರೂಲಿಂಗ್ ಕೊಟ್ಟಿದ್ದೀರಿ. ಅವರು ಧರಣಿ ಕುಳಿತರೂ ಕೂಡ ಸಭೆ ನಡೆಸಬಹುದು ಎಂದು ಹೇಳಿರುವಾಗ ಈ ಪ್ರಶ್ನೆ ಬರುವುದಿಲ್ಲ. ಅವರೂ ತಮ್ಮ ಅಭಿಪ್ರಾಯವನ್ನೂ ಹೇಳಿದ್ದಾರೆ. ನಾನು ಇವತ್ತು ಸಾಯಂಕಾಲವರೆಗೂ ಕೊಡುತ್ತೇನೆ. ಆದರೆ ಮೇಲೆ ಕೊಡುವುದಿಲ್ಲವೆಂದು ಅವರು ಹೇಳಿದ್ದಾರೆ.

ಅಧ್ಯಕ್ಷರು.—ಯಾರು ಹೇಳಿದರು? ಇವತ್ತು ಸಾಯಂಕಾಲದವರೆಗಾ ?

ಶ್ರೀ ಎಂ. ವಲ್ಲಿಕಾರ್ಜುನ ಖರ್ಗೆ.—ಆದೇ ಹೌಸ್ ಅಡ್ಜರ್ನ್ ಆಗುವವರೆಗೆ ಎಂದು ಹೇಳಿದ್ದಾರೆ.

ಶ್ರೀ ಪಾಟೀಲ್ ನಾಗರಾಜ್.—ಅಧ್ಯಕ್ಷರು ತಮ್ಮ ಕಾರ್ಯಾಲಯಕ್ಕೆ ಕರೆದು ಮಾತನಾಡಿದಂಥ ಸಂಪ್ರದಾಯ ಇದೆ.

ಶ್ರೀ ಪಿ. ಜಿ. ಆರ್ ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು, ಸಭಾ ನಾಯಕರು ಇಲ್ಲಿ ಇರುವುದರಿಂದ ಒಂದು ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ದೇಶಪಾಂಡೆ ಅವರಿಗೆ ತಾವು ನಾಳೆ ಮಾತನಾಡಲಿಕ್ಕೆ ಅವಕಾಶವನ್ನು ಒದಗಿಸಿಕೊಟ್ಟಿದ್ದೀರಿ. ಒಂದು ಮಹತ್ವದ ವಿಚಾರದ ಬಗ್ಗೆ, ಮಾನ್ಯ ಮುಖ್ಯಮಂತ್ರಿಗಳಿಗೆ ಸದನ ನಡೆಯುವಾಗಲೇ ತಿಳಿಸಿದ್ದೇವೆ. ಮೈಸೂರಿನಲ್ಲಿ ನಡೆದಂಥ ಗಲಭೆ ಪ್ರಕರಣದಲ್ಲಿ ಬಂಧಿತರಾಗಿದ್ದಂಥ ಒಬ್ಬರು ಬಳ್ಳಾರಿ ಜೈಲಿನಲ್ಲಿ ಸತ್ತಿದ್ದಾರೆ. ಅವರ ಶವವನ್ನು ಇವತ್ತು ಮೈಸೂರಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ಮೈಸೂರಿನಲ್ಲಿ ಪರಿಸ್ಥಿತಿ ಬಹಳ ಗಂಭೀರವಾಗಿದೆ ಯೆಂದು ನಮಗೆ ವರದಿ ಬಂದಿದೆ. ಇದನ್ನು ನಾವು ಮುಖ್ಯಮಂತ್ರಿಗಳಿಗೆ ತಿಳಿಸಿದ್ದೇವೆ. ಈ ಬಗ್ಗೆ ಸದನಕ್ಕೆ ಹೇಳುವುದೇನಾದರೂ ಇದ್ದರೆ ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಉಪ ನಾಯಕರು ಯಾವ ವಿಚಾರವನ್ನು ನನಗೆ ಬರೆದು ತಿಳಿಕೆದ್ದಾರೆ. ಅದು ಬೆಳಿಗ್ಗೆ ನನಗೆ ಗೊತ್ತಾಗಿದೆ. ಅದು ಗೊತ್ತಾದ ತಕ್ಷಣ ನನಗನ್ನಿಸಿತು ಬಹುಶಃ ಇದರಿಂದ ಮೈಸೂರಿನಲ್ಲಿ ಟೆನ್‌ಶನ್ ಆಗುತ್ತದೆ ಎಂದು ಅನಿಸಿತು. ಆದಕ್ಕಾಗಿ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ. ಈ ಸಭೆಗೆ ನಾನು ಬಂದಿದ್ದೇನೆ. ಸಭೆಯ ಪರಿಸ್ಥಿತಿ ಏನಿದೆ ಎಂದು ತಿಳಿದುಕೊಂಡು ಹೇಳಬೇಕೆಂದು ಹೇಳಿದ್ದೇನೆ. ಬಹುಶಃ ಆಫೀಸಿಗೆ ಹೋದಮೇಲೆ ನನಗೆ ಗೊತ್ತಾಗುತ್ತದೆ. ಏನಾದರೂ ತಿಳಿಸುವಂಥ ವಿಚಾರ ಇದ್ದರೆ ಅವರಿಗೆ ಫೋನ್ ಮೂಲಕ ತಿಳಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸದನಕ್ಕೂ ತಿಳಿಸಿ.

ಶ್ರೀ ವೀರೇಂದ್ರ ಪಾಟೀಲ್.—ಸದನಕ್ಕೂ ತಿಳಿಸುತ್ತೇನೆ.

ಶ್ರೀ ಪಾಟೀಲ್ ನಾಗರಾಜ್.—ಒಳ್ಳೆಯ ವಾತಾವರಣ ಇರಲಿ. ಮುಖ್ಯಮಂತ್ರಿಗಳು ಇರುತ್ತಾರೆ, ಅವರನ್ನು ತಮ್ಮ ಕಾರ್ಯಾಲಯದಲ್ಲಿ ಕರೆಸಿ ಮಾತನಾಡಿ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಈ ವಾತಾವರಣದಲ್ಲಿ ಸಭೆ ನಡೆಸುವುದು ಅಷ್ಟು ಸೂಕ್ತ ಅಲ್ಲ.

ಅಧ್ಯಕ್ಷರು.—ಈಗ ಆರು ಗಂಟೆ ಸಮಾಪಿಸುತ್ತಿದೆ. ಈಗ ಸಭೆಯ ಕಾರ್ಯ ಕಲಾಪಗಳನ್ನು ಮುಂದುವರೆಸಿ. ಮತ್ತೆ ಸದನವು ನಾಳೆ ಬೆಳಿಗ್ಗೆ ಒಂಬತ್ತು ಗಂಟೆಗೆ ಸಮಾವೇಶವಾಗುತ್ತದೆ.

(ಸದನವು ಐದು ಗಂಟೆ ಐವತ್ತು ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೮ನೇ ಜೂನ್ ಮಾಹೆ ೧೯೮೦ರ ಶುಕ್ರವಾರದಂದು ೯ ಗಂಟೆಗೆ ಸೇರಲು ನಿಶ್ಚಯಿಸಿತು)

---

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.